ಆರ್‌ಐಡಿಎಫ್-4	260	85	175	41	10	31
ಆರ್‌ಐಡಿಎಫ್-5	317	6	311	34	-	34
ಆರ್‌ಐಡಿಎಫ್-6	150	-	150	39	-	39

3. ಈವರೆಗೆ ಲೋಕೋಪಯೋಗಿ ಇಲಾಖೆಯಡಿ 302 ಕೋಟಿ ರೂ ಸಾಲ ಪಡೆಯಲಾಗಿದೆ. ಬಡ್ಡಿಯನ್ನು ಇಲಾಖಾವಾರು ಪ್ರತ್ಯೇಕವಾಗಿ ಪಾವತಿಸುವುದಲ್ಲ. ರಾಜ್ಯದಲ್ಲಿ ಈ ಯೋಜನೆಯಡಿ ಪಡೆಯಲಾದ ಒಟ್ಟಾರೆ ಸಾಲಕ್ಕನುಗುಣವಾಗಿ ಪಾವತಿಸಲಾಗುತ್ತಿದೆ. ಇದರಂತೆ ವರ್ಷವಾರು ರಾಜ್ಯ ಸರ್ಕಾರ ನೀಡಿರುವ ಬಡ್ಡಿಯ ವಿವರ ಕೆಳಕಂಡಂತೆ ಇದೆ.

1996-97	6.65 ಕೋಟಿ
1997-98	14.09 ಕೋಟಿ
1998-99	23.23 ಕೋಟಿ
1999-2000	37.77 ಕೋಟಿ
2000-01	37.38 ಕೋಟಿ

(ಡಿಸೆಂಬರ್ 2000)

ಬೈಲಹೊಂಗಲ ನಗರದ ಕಿತ್ತೂರು ಚೆನ್ನಮ್ಮ ಸಮಾಧಿಗೆ ಹೋಗುವ ರಸ್ತೆ ಪೂರ್ಣಗೊಳಿಸುವುದು.

577(714)

ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ(ಬೈಲಹೊಂಗಲ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಿ.ಆರ್.ಎಫ್. ಫಂಡಿನಲ್ಲಿ ಬೆಳಗಾಂವ ಜಿಲ್ಲೆ ಬೈಲಹೊಂಗಲ ನಗರದ ಕಿತ್ತೂರು ಚೆನ್ನಮ್ಮ ಸಮಾಧಿಗೆ ಹೋಗುವ ರಸ್ತೆಗೆ ಕೇಂದ್ರ ಸರ್ಕಾರ ಎಷ್ಟು ಮೊತ್ತಕ್ಕೆ ಅನುಮತಿಯನ್ನು ನೀಡಲಾಯಿತು ಮತ್ತು ಈಗಾಗಲೇ ಎಷ್ಟು ಹಣ ಖರ್ಚಾಗಿದೆ.

ಆ) ಕೇಂದ್ರ ಸರ್ಕಾರವು ಈ ಕೆಲಸವನ್ನು ಎಷ್ಟು ದಿನಗಳಲ್ಲಿ ಮಾಡಿ ಮುಗಿಸಬೇಕೆಂದು ಆದೇಶ ನೀಡಲಾಗಿದೆ.

ಇ) ಈ ಕೆಲಸ ತೆಗೆದುಕೊಳ್ಳಲು ಈ ಹಿಂದೆಯೇ ಕೇಂದ್ರ ಸರ್ಕಾರ ಒಪ್ಪಿಗೆ ನೀಡಿದ್ದರೂ ಸಹ ರಾಜ್ಯ ಸರ್ಕಾರ ಕೆಲಸ ತೆಗೆದುಕೊಳ್ಳಲು ವಿಳಂಬ ಮಾಡುತ್ತಿರುವ ಸಂಗತಿ ನಿಜವೇ?

ಈ) ಗುತ್ತಿಗೆದಾರರಿಗೆ ಸಮಯಕ್ಕೆ ಸರಿಯಾಗಿ ಹಣ ಪಾವತಿ ಮಾಡದೇ ಇರುವುದರಿಂದ ಗುತ್ತಿಗೆದಾರರು ಈ ಕೆಲಸವನ್ನು ಅರ್ಧಕ್ಕೆ ನಿಲ್ಲಿಸಿರುವ ಸಂಗತಿ ನಿಜವೇ? ಹಾಗಿದ್ದಲ್ಲಿ ಪೂರ್ಣ ಕೆಲಸ ಮುಗಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ?

ಉ) ಎಷ್ಟು ದಿಗಳಲ್ಲಿ ಈ ಕೆಲಸವನ್ನು ಮಾಡಿ ಮುಗಿಸಲಾಗುವುದು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

ಅ) ಸಿ.ಆರ್.ಎಫ್.ಅಡಿಯಲ್ಲಿ ಬೆಳಗಾಂ ಜಿಲ್ಲೆಯ ಬೈಲಹೊಂಗಲ ನಗರದ ಕಿತ್ತೂರು ಚೆನ್ನಮ್ಮ ಸಮಾಧಿ ರಸ್ತೆಯನ್ನು ಅಭಿವೃದ್ಧಿಪಡಿಸಲು ಕೇಂದ್ರ ಸರ್ಕಾರವು ರೂ. 100.00 ಲಕ್ಷಗಳಿಗೆ ಅನುಮೋದನೆಯನ್ನು ನೀಡಲಾಗಿರುತ್ತದೆ. ಇದುವರೆವಿಗೂ ರೂ.46.00 ಲಕ್ಷ ಖರ್ಚಾಗಿರುತ್ತದೆ.

ಆ) ಕೇಂದ್ರ ಸರ್ಕಾರದ ಆದೇಶದಂತೆ, ರಾಜ್ಯದ ಆಯವ್ಯಯ ಅನುದಾನದ ಲಭ್ಯತೆಗನುಗುಣವಾಗಿ ಕಾಮಗಾರಿಯನ್ನು ಕೈಗೊಂಡು ಪೂರ್ಣಗೊಳಿಸುವಂತೆ ಸೂಚಿಸಲಾಗಿದೆ. ಸದರಿ ಕಾಮಗಾರಿಯು 12: 1999 ರಲ್ಲಿ ಮುಗಿಯಬೇಕಾಗಿತ್ತು.

ಇ) ಕೇಂದ್ರ ಸರ್ಕಾರವು 11: 1995ರಲ್ಲಿ ಒಪ್ಪಿಗೆ ಸೂಚಿಸಿದ್ದರೂ ರಾಜ್ಯದ ಆಯವ್ಯಯದಲ್ಲಿ ಸದರಿ ಕಾಮಗಾರಿಗೆ ಸೂಕ್ತ ಅನುದಾನ ಕೊರತೆ ಇದ್ದ ಕಾರಣ ರಾಜ್ಯ ಸರ್ಕಾರವು 12: 1997ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಿದೆ.

ಈ) ಗುತ್ತಿಗೆದಾರರಿಗೆ ಹಣ ಪಾವತಿಸದಿರುವ ಕಾರಣದಿಂದ ಕೆಲಸ ನಿಂತಿರುವುದಿಲ್ಲ. ಆದರೆ ಸದರಿ ರಸ್ತೆಯ ಅಭಿವೃದ್ಧಿ ಕಾಮಗಾರಿ ಮತ್ತು ಒಂದು ಬದಿ ಚರಂಡಿ ಕೆಲಸ ಮುಗಿದಿದ್ದು, ಇನ್ನೊಂದು ಬದಿ ಚರಂಡಿ ಕೆಲಸ ಪ್ರಾರಂಭಿಸಿದಾಗ ಸದರಿ ಚರಂಡಿಯ ಮೇಲೆ ಚಪ್ಪಡಿ ಹಾಕಬೇಕು, ಇಲ್ಲದಿದ್ದಲ್ಲಿ ಕೆಲಸವನ್ನು ಮಾಡಬಾರದೆಂದು ಸ್ಥಳೀಯ ಸಾರ್ವಜನಿಕರು ಈ ಕಾಮಗಾರಿಯನ್ನು ಮುಂದುವರಿಸಲು ಅಡ್ಡಿಪಡಿಸಿರುತ್ತಾರೆ. ಚರಂಡಿ ಮೇಲೆ ಚಪ್ಪಡಿ ಹಾಕುವ ಕಾರ್ಯವು, ಸದರಿ ಅಭಿವೃದ್ಧಿ ಕಾರ್ಯ ಅಂದಾಜುಪಟ್ಟಿಯಲ್ಲಿ ನಮೂದಿಸಿಲ್ಲದಿರುವುದರಿಂದ, ಚರಂಡಿ ಮೇಲೆ ಈಗ

ಚಪ್ಪಡಿಗಳನ್ನು ಹಾಕಲು ಅವಕಾಶವಿರುವುದಿಲ್ಲ. ಸಾರ್ವಜನಿಕರ ಅಡಚಣೆ ನಿವಾರಿಸಿದ ನಂತರ ಕಾಮಗಾರಿಯನ್ನು ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ಊ) ಸ್ಥಳೀಯ ಸಾರ್ವಜನಿಕರಿಂದ ಇರುವ ಅಡ್ಡಿಯನ್ನು ನಿವಾರಿಸಿ ಶೀಘ್ರ ಕೆಲಸ ಮುಗಿಸಲು ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಲಾಗಿದೆ.

2000-2001ನೇ ಸಾಲಿನ ಲೆಕ್ಕ ಶೀರ್ಷಿಕೆ 3054ರ ಕೆಲಸಗಳು ಸ್ಥಗಿತಗೊಂಡಿರುವ ವಿಚಾರ.

578(೭೧೯)

ಶ್ರೀ ಕೌಜಲಗಿ ಮಹಾಂತೇಶ ಶಿವಾನಂದ (ಬೈಲಹೊಂಗಲ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಸನ್ ೧೯೯೯-೨೦೦೦ ಹಾಗೂ ೨೦೦೦-೦೧ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕ ಶೀರ್ಷಿಕೆ ೩೦೫೪ರ ಕೆಲಸಗಳಿಗೆ ಎಷ್ಟು ಮೊತ್ತದ ಹಣ ಮಂಜೂರಾಗಿತ್ತು;

2. ಮಂಜೂರಾದ ಹಣದಲ್ಲಿ ಪ್ರತಿಯೊಂದು ವಿಭಾಗಗಳಿಗೆ ಎಷ್ಟೆಷ್ಟು ಹಣ ನಿಗಧಿಪಡಿಸಲಾಗಿತ್ತು;

3. ಸನ್ ೧೯೯೯-೨೦೦೦ ಹಾಗೂ ೨೦೦೦-೦೧ನೇ ಸಾಲಿನಲ್ಲಿ ಪ್ರತಿಯೊಂದು ವಿಭಾಗಗಳಿಗೆ ಎಷ್ಟೆಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ;

4. ಪ್ರತಿಯೊಂದು ವಿಭಾಗದಲ್ಲಿ ಕಳೆದ ಸಾಲಿನಲ್ಲಿ ಮತ್ತು ಈ ಸಾಲಿನಲ್ಲಿ ಎಷ್ಟು ಪೆಂಡಿಂಗ್ ಬಿಲ್ಲು ಇರುವುದು; (ಉಪವಿಭಾಗವಾರು ಮಾಹಿತಿ ನೀಡುವುದು)

5. ಲೆಕ್ಕ ಶೀರ್ಷಿಕೆ ೩೦೫೪ರ ಅಡಿಯಲ್ಲಿ ಮಂಜೂರಾದ ಕೆಲಸಗಳಿಗೆ ಸಮಯಕ್ಕೆ ಸರಿಯಾಗಿ ಹಣ ಬಿಡುಗಡೆಯಾಗದೇ ಇರುವುದರಿಂದ ಆ ಕೆಲಸಗಳನ್ನು ತೆಗೆದುಕೊಳ್ಳಲು ಗುತ್ತಿಗೆದಾರರು ಯಾರೂ ಮುಂದೆ ಬರುತ್ತಿಲ್ಲವೆಂಬ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಸಮಯಕ್ಕೆ ಸರಿಯಾಗಿ ಹಣ ಬಿಡುಗಡೆ ಮಾಡಿ ಕೆಲಸಗಳು ಉತ್ತಮ ಗುಣಮಟ್ಟದ್ದಾಗಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

1. ಲೆಕ್ಕ ಶೀರ್ಷಿಕೆ ೩೦೫೪ ರಸ್ತೆ ಮತ್ತು ಸೇತುವೆ ಯೋಜನೇತರ ಅಡಿ